ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ: 080-22267585
ಇ-ಮೇಲ್: aeeno4bldg@gmail.com

# ಲೋಕೋಪಯೋಗಿ ಇಲಾಖೆ

ಸಂ: ಸಕಾಅ/ಕಉವಿ-4/ಸ.ಇಂ/ಕ.ದೃಢೀಕರಣ ಪತ್ರ/2022-23/1210-11 ದಿನಾಂಕ: 01.02.2023

ರವರಿಗೆ,

Principal
Sri. Ranga Vidya Nikethan (R),
No. 13/4, 911/1, Dasappa Annuexure,
Krishna Gowd Layout,
T. Dasarahalli,
Bangalore – 560 057.

ಮಾನ್ಯರೆ,

ವಿಷಯ: ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ: 1. ತಮ್ಮ ವಿದ್ಯಾ ಸಂಸ್ಥೆಯ ಕಛೇರಿ ಪತ್ರ ದಿನಾಂಕ 28.01.2023
2. ಕರ್ನಾಟಕ ಸರ್ಕಾರ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಸುತ್ತೋಲೆ ಪತ್ರ ಸಂಖ್ಯೆ : ಲೋಇ 59 ಬಿಇಡಿ 2019 ಬೆಂಗಳೂರು ದಿ: 06.05.2022

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Thimmavva Dasappa Memorial Charitable Trust, T. Dasarahalli, Bangalore ವಿದ್ಯಾಸಂಸ್ಥೆಯ ವತಿಯಿಂದ ನಡೆಸುತ್ತಿರುವ Sri. Ranga Vidya Nikethan (R) # 13/4 #911/1, Dasappa Annexure, Krishna Gowda Layout, T. Dasarahalli, NH-4, Bangalore – 57 ಇಲ್ಲಿನ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖಿತ (1)ರ ಪತ್ರದಲ್ಲಿ ಕೋರಿರುತ್ತೀರಿ.

ಅದರಂತೆ, ದಿನಾಂಕ: 30.01.2023 ರಂದು ಸಂಬಂಧಪಟ್ಟ ಸಹಾಯಕ ಇಂಜಿನಿಯರ್ ರವರೊಂದಿಗೆ ಸದರಿ ಕಾಲೇಜಿನ ಚೇರ್‌ಮೆನ್ ಆದ ಶ್ರೀ. ರಮೇಶ್ ಕೆ ಹಾಗೂ ಪ್ರಾಶುಂಪಾಲರಾದ ಶ್ರೀ. ಬಾಲಕೃಷ್ಣ ರವರುಗಳೊಂದಿಗೆ ಸದರಿ ಶಾಲಾ ಕಟ್ಟಡದ ಪರಿವೀಕ್ಷಣೆಯನ್ನು ಕೈಗೊಳ್ಳಲಾಯಿತು.

Sri. Ranga Vidya Nikethan (R) # 13/4, #911/1, Dasappa Annexure, Krishna Gowda Layout, T. Dasarahalli, NH-4, Bangalore – 57 ಇಲ್ಲಿನ ಶಾಲಾ ಕಟ್ಟಡವನ್ನು 2786.60 ಚ.ಮೀ ಜಾಗದಲ್ಲಿ 2017ರಲ್ಲಿ ನಿರ್ಮಿಸಲಾಗಿರುತ್ತದೆ. ಸದರಿ ಕಟ್ಟಡವು RCC Framed Structure ಕಟ್ಟಡವಾಗಿದ್ದು, ನೆಲ ಮಹಡಿಯೊಂದಿಗೆ ನಾಲ್ಕು ಅಂತಸ್ತಿನ ಕಟ್ಟಡ (ನೆಲ, ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ಮಹಡಿ) ವಾಗಿರುತ್ತದೆ. 05ನೇ ಮಹಡಿಯ ಛಾವಣಿಯನ್ನು M.S. Truss with light roof ಶೀಟ್‌ನಿಂದ ನಿರ್ಮಿಸಿದ್ದು, ಕಟ್ಟಡದಲ್ಲಿ ಗೋಡೆಗಳನ್ನು ಇಟ್ಟಿಗೆಯಿಂದ ನಿರ್ಮಿಸಿದ್ದು, Cota Stone ನೆಲಹಾಸು, ಸ್ಟೀಲ್ ಕಿಟಕಿಗಳು ಮತ್ತು ಫ್ಲಷ್ ಬಾಗಿಲುಗಳನ್ನು ಅಳವಡಿಸಲಾಗಿರುತ್ತದೆ.

ನಂತರ ಹಾಜರಿದ್ದ ಶಾಲಾ ಸದಸ್ಯರೊಂದಿಗೆ ಕಟ್ಟಡದ ಒಳ ಹಾಗೂ ಹೊರಭಾಗವನ್ನು ಪರಿವೀಕ್ಷಣೆ ಮಾಡಲಾಗಿ, ಸದರಿ ಕಟ್ಟಡವು ನೆಲ ಮಹಡಿಯೊಂದಿಗೆ ನಾಲ್ಕು ಅಂತಸ್ತು ಹೊಂದಿದ್ದು, ಒಟ್ಟು 65 ಶಾಲಾ ಕೊಠಡಿಗಳಿರುವುದು ಕಂಡುಬಂದಿರುತ್ತದೆ.

S.R Consultants and Engineers, ISO:9001-2015 & NABL Accredited Laboratory as per ISO/IEC 17025:2017, No. 8, 1st Cross, Annapoorneshwari Layout, Near Maruthi School, 8th Phase, J.P. Nagar, Bangalore – 62 ವತಿಯಿಂದ Er. John L (BE-Civil, M Tech (Structure), BCCL/BL-3, 6/SE-0200/2021-22 No. 74, Karubele, Kumbalgodu Post Bangalore South District, Bangalore - 74 ಇವರು ಸದರಿ ಕಾಲೇಜು ಕಟ್ಟಡಕ್ಕೆ Non Destructive Test ಅಡಿಯಲ್ಲಿ Rebound hammer test and Ultrasonic pulse velocity test ಗಳನ್ನು

ಕೈಗೊಂಡು ಅದರ ವರದಿಗಳನ್ನು ಸಲ್ಲಿಸಿದ್ದು ಸದರಿ ವರದಿಯಂತೆ Rebound hammer test ಪ್ರಕಾರ In site strength of Concrete Range is 26 N/mm2 ಮತ್ತು Ultra sonic pluse velocity test ಪ್ರಕಾರ "Good Concrete" ಎಂಬುದಾಗಿ ವರದಿಸಿರುತ್ತಾರೆ.

**ತಾವುಗಳು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸಿರುತ್ತೀರಿ.**

1. Annexure 'C, (Clause 12.2.8)
2. Ultrasonic Pulse Velocity Test Report
3. Rebound Hammer Test result.
4. Katha Certificate
5. Sale deed Certificate
6. As built Drawing

ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2)ರಲ್ಲಿ ಸೂಚಿಸಿರುವಂತೆ ನಗರ ಪ್ರದೇಶದಲ್ಲಿ ಒಂದು ಶಾಲೆಗೆ – ರೂ. 5,000.00 ಗಳನ್ನು ಶುಲ್ಕವಾಗಿ ಪಾವತಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಶಾಲಾ ಸಂಸ್ಥೆಯವರು ಚಲನ್ ಉಲ್ಲೇಖ ಸಂಖ್ಯೆ: CR0123005900823807 dtd. 31.01.2023 ರಲ್ಲಿ ರೂ. 5,000.00 (ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲಾಗಿರುತ್ತದೆ.

ಸದರಿ ಕಾಲೇಜು ಕಟ್ಟಡಗಳ ಎಲ್ಲಾ ಮಹಡಿಗಳು ಹಾಗೂ ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು. ಈ ಸಮಯದಲ್ಲಿ ಮೇಲ್ನೋಟಕ್ಕೆ ಕಟ್ಟಡದಲ್ಲಿ ಯಾವುದೇ ಬಿರುಕುಗಳಾಗಲೀ ಮತ್ತು ಗೋಡೆ/ ಮೇಲ್ಚಾವಣಿಯಗಳಾಗಲೀ ತೇವಾಂಶ ಕಂಡು ಬಂದಿರುವುದಿಲ್ಲ ಈ ಹಿನ್ನಲೆಯಲ್ಲಿ ಸದರಿ ಕಟ್ಟಡವು ಸುರಕ್ಷಿತವಾಗಿದೆ ಎಂದು ಅಭಿಪ್ರಾಯಿಸಲಾಯಿತು. ಸದರಿ ಕಟ್ಟಡಗಳ ನಿರ್ವಹಣೆ ಮಾಡುವ ಜವಬ್ದಾರಿಯು ಸದರಿ ವಿದ್ಯಾಸಂಸ್ಥೆಯವರದಾಗಿರುತ್ತದೆ ಹಾಗೂ ಈ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

ಮುಂದುವರೆದು ಕಟ್ಟಡದ ಮಂಜೂರಾದ ನಕ್ಷೆಗೆ ವಿರುದ್ದವಾಗಿ ಯಾವುದಾದರೂ ಬದಲಾವಣೆ ಅಥವಾ ನಿರ್ಮಾಣ ಮಾಡಿದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದೆಂದು ತಿಳಿಸುತ್ತಾ, ಸದರಿ ಪ್ರಮಾಣ ಪತ್ರವನ್ನು Thimmavva Dasappa Memorial Charitable Trust,T. Dasarahalli, Bangalore ವಿದ್ಯಾಸಂಸ್ಥೆಯ ವತಿಯಿಂದ ನಡೆಸುತ್ತಿರುವ Sri. Ranga Vidya Nikethan (R) # 13/4 #911/1, Dasappa Annexure, Krishna Gowda Layout, T. Dasarahalli, NH-4, Bangalore – 57 ಇಲ್ಲಿನ ಶಾಲಾ ಕಟ್ಟಡಕ್ಕೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಬಹುದಾಗಿರುತ್ತದೆ. ಅದರಂತೆ, ಸದರಿ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ.4 ಕಟ್ಟಡಗಳ ಉಪವಿಭಾಗ,
ಬೆಂಗಳೂರು.